ಕಾರ್ಡಿಗೆ ಫೋಟೋ ಹಚ್ಚಿಸಲು ಸಹ ತೀರ್ಮಾನಿಸಲಾಗಿದೆ. ಹಾಗೂ ಇದನ್ನು ಅನುಷ್ಠಾನಗೊಳಿಸಲು ಹೊಸ ಪಡಿತರ ಚೀಟಿಯನ್ನು ಮುದ್ರಿಸಿ ವಿತರಿಸುವ ಸಮಯದಲ್ಲಿ ಫೋಟೋ ಹಚ್ಚುವಂತೆ ವ್ಯವಸ್ಥೆ ಮಾಡಲಾಗುತ್ತಿದೆ.

೧೩) ಬಂಟವಾಳ ತಾಲ್ಲೂಕಿನ ವಾಮದ ಪದವು ಸರಕಾರಿ ಕಿರಿಯ ಕಾಲೇಜಿನಲ್ಲಿ ಶಿಕ್ಷಕರ ಕೊರತೆ ಇದ್ದು ಖಾಲಿ ಸ್ಥಾನಗಳನ್ನು ಭರ್ತಿ ಮಾಡಲು ಒತ್ತಾಯ.

ಶ್ರೀ ರಮಾನಾಥ ರೈ (ಬಂಟ್ವಾಳ).—ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಬಂಟವಾಳ ತಾಲ್ಲೂಕಿನ ವಾಮದ ಪದವು ಸರಕಾರಿ ಕಿರಿಯ ಕಾಲೇಜಿನ ಪ್ರೌಢ ಶಾಲಾ ವಿಭಾಗದಲ್ಲಿ ಶಿಕ್ಷಕರ ಭಾರೀ ಕೊರತೆ ಇದೆ. ವಿಜ್ಞಾನ ವಿಭಾಗದಲ್ಲಿ ಎರಡು, ಕಲಾ ವಿಭಾಗದಲ್ಲಿ ಎರಡು, ಇಂಗ್ಲೀಷ್ ವಿಭಾಗದಲ್ಲಿ ಒಂದು, ದೈಹಿಕ ಶಿಕ್ಷಣ ವಿಭಾಗದಲ್ಲಿ ಒಂದು ವಂತಿಕ್ಕ ವೃತ್ತಿ ಶಿಕ್ಷಣ ವಿಭಾಗದಲ್ಲಿ ಒಂದು ಹೀಗೆ ಒಟ್ಟು ಏಳುಶಿಕ್ಷಕರ ಕೊರತೆ ಇದೆ. ಇದರಿಂದಾಗಿ ಆ ಪ್ರೌಢ ಶಾಲೆಯಲ್ಲಿ ಓದುವ ವಿದ್ಯಾರ್ಥಿಗಳಿಗೆ ತುಂಬಾ ತೊಂದರೆ ಆಗಿದೆ. ವಿದ್ಯಾರ್ಥಿಗಳ ವಿದ್ಯಾರ್ಜನೆಗೆ ತೊಂದರೆಯಾಗದಂತೆ ಶಿಕ್ಷಣ ಸಚಿವರು ಖಾಲಿ ಇರುವ ಶಿಕ್ಷಕರ ಸ್ಥಾನಗಳನ್ನು ಭರ್ತಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜೀವರಾಜ ಆಳ್ವ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಈಗಾಗಲೇ ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಈ ಹುದ್ದೆಗಳನ್ನು ಆದಷ್ಟು ಬೇಗನೆ ನೇಮಕ ಮಾಡಲಿಕ್ಕೆ ಸರ್ಕಾರ ಆಜ್ಞೆ ಮಾಡಿದೆ.

೧೪) ಸೇಡಂ ತಾಲ್ಲೂಕು ಜಾಕನಪಲ್ಲಿ ಗ್ರಾಮಕ್ಕೆ ನ್ಯಾಯಬೆಲೆ ಅಂಗಡಿಯಂ ಮೂಲಕ ದವಸಧಾನ್ಯಗಳ ಸಮರ್ಪಕ ವಿತರಣೆಗೆ ಒತ್ತಾಯ.

ಶ್ರೀ ಚಂದ್ರಶೇಖರ ರೆಡ್ಡಿ ದೇಶ್‌ಮುಖ್ ಮದನ.—ಮಾನ್ಯ ಅಧ್ಯಕ್ಷರೇ, ಸುಮಾರು ಎರಡು ಮೂರು ತಿಂಗಳು ಸತತವಾಗಿ ನ್ಯಾಯಬೆಲೆ ಅಂಗಡಿ, ಜಾಕನಪಲ್ಲಿ ಗ್ರಾಮ, ಸೇಡಂ ತಾಲ್ಲೂಕು, ಇಲ್ಲಿ ಸರಿಯಾಗಿ ಕೆಲಸ ಮಾಡುತ್ತಿರುವುದಿಲ್ಲವಾಗಿ, ಸಾರ್ವಜನಿಕರಿಗೆ ಸಮಯಕ್ಕೆ ಸರಿಯಾಗಿ ದವಸಧಾನ್ಯಗಳು ದೊರೆಯದ ಕಾರಣ ಬಹಳ ತೊಂದರೆ ಉಂಟಾಗಿದೆ. ಮೇಲಿನ ಅಧಿಕಾರಿಗಳಿಗೆ ಅರ್ಜಿ ಕೊಟ್ಟರೂ ಏನು ಕ್ರಮ ಕೈಗೊಂಡಿರುವುದಿಲ್ಲ. ತಾಲ್ಲೂಕು ಪಂಚಾಯತಿ ಸಮಿತಿ ಕಾರ್ಯದರ್ಶಿಗಳು ಈಗಿರುವ ನ್ಯಾಯಬೆಲೆ ಅಂಗಡಿಯನ್ನು ಬದಲಾಯಿಸಿ ಆಜ್ಞೆ ನೀಡಿದ್ದಾಗ್ಯೂ, ಜಿಲ್ಲಾ ಪರಿಷತ್ ಕಾರ್ಯದರ್ಶಿಗಳು ಅದನ್ನು ತಡೆಹಿಡಿದಿದ್ದಾರೆಂದು ತಿಳಿದುಬಂದಿದೆ.

ಸದರಿ ಗ್ರಾಮದ ಜನರಿಗೆ ದವಸಧಾನ್ಯಗಳು ಸಮರ್ಪಕವಾಗಿ ಸರಬರಾಜು ಮಾಡಿಸಲು ಸೂಕ್ತ ವ್ಯವಸ್ಥೆ ಮಾಡಬೇಕೆಂದು ಕೋರಿಕೆ.

ಶ್ರೀ ಬಸವರಾಜ್ ಪಾಟೀಲ್ ಅನ್ವರಿ (ಆಹಾರ ಮತ್ತು ನಾಗರೀಕ ಸರಬರಾಜು ಖಾತೆ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ತಿಳಿಸಿರುವ ಸೇಡಂ ತಾಲ್ಲೂಕಿನ ಜಾಕನಪಲ್ಲಿ ಗ್ರಾಮದ ನ್ಯಾಯಬೆಲೆ ಅಂಗಡಿಯು ಸರಿಯಾಗಿ ಕೆಲಸ ಮಾಡದೆ ಸಾರ್ವಜನಿಕರಿಗೆ ಸಮಯಕ್ಕೆ ಸರಿಯಾಗಿ ದವಸ ಧಾನ್ಯಗಳನ್ನು ವಿತರಿಸದೆ ತೊಂದರೆಯನ್ನುಂಟು ಮಾಡುತ್ತಿದ್ದರೆ ಅದನ್ನು ಸರಿಪಡಿಸುವಂತೆ ಜಿಲ್ಲಾ ಪರಿಷತ್ತಿಗೆ ಸೂಚಿಸಲಾಗುವುದು. ಹಾಗೂ ತಪ್ಪಿತಸ್ಥರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳಲು ಸೂಚಿಸಲಾಗುವುದು.

೧೫) ಪುತ್ತೂರು ತಾಲ್ಲೂಕಿನ ಕೊಡಿಂಬಳ ಗ್ರಾಮದ ಶಾಂತ್ಯಾಡಿಯ ವಿಜಯನ್ ಅವರಿಗೆ ಕದಾಯ ಅಧಿಕಾರಿಗಳಿಂದ ಉಂಟಾಗಿರುವ ಕಿರುಕುಳವನ್ನು ತಪ್ಪಿಸಲು ಒತ್ತಾಯ.

ಶ್ರೀ ಕೆ. ಕುಶಾಲ.—ಮಾನ್ಯ ಅಧ್ಯಕ್ಷರೇ, ಸುಳ್ಯ ವಿಧಾನ ಸಭಾ ಕ್ಷೇತ್ರದ ಪುತ್ತೂರು ತಾಲ್ಲೂಕಿನ ಕೊಡಿಂಬಳ ಗ್ರಾಮದ ಶಾಂತ್ಯಾಡಿ ಎಂಬಲ್ಲಿ ಪಾಸ್ತವಿಸಿಕೊಂಡು ಶ್ರೀ ವಿಜಯನ್ ಎಂಬುವರು ಕಳೆದ

ಕೆಲವು ವರ್ಷಗಳಿಂದ ಸರಕಾರಿ ಆಬಾವಿನ ಜಮೀನಾನ ಸುಮಾರು ೧–೫೦ ಎಕರೆ ಅತಿಕ್ರಮಣ ಮಾಡಿ, ವಾಸ್ತವಿಸಿಕೊಂಡು ಬರುತ್ತಿದ್ದಾರೆ. ವಾಸ್ತವ್ಯದ ಜೊತೆ ಕೃಷಿ ಸಹ ಮಾಡಿರುತ್ತಾರೆ. ಸದ್ರಿಯವರು ಬಡವರಾಗಿದ್ದು ಹಿಂದುಳಿದ ಜನಾಂಗದವರಾಗಿದ್ದು, ಕೃಷಿ ಕೂಲಿ ಕೆಲಸ ಮಾಡಿ ಜೀವಿಸಿಕೊಂಡು ಬರುತ್ತಿರುವವರಾಗಿರುತ್ತಾರೆ. ಸದರಿಯವರು ಕೆಲವು ಮೈಲುಗಳ ದೂರ ಕೂಲಿ ಕೆಲಸವನ್ನು ಹುಡುಕಿ ಜೀವಿಸಿಕೊಂಡು ಬರುವವರಾಗಿದ್ದು, ಇವರ ಪತ್ನಿಯನ್ನು ಹೆರಿಗೆಗೆ ತವರು ಮನೆಗೆ ಕಳುಹಿಸಿದ ಸಂದರ್ಭದಲ್ಲಿ ವಿಜಯನ್ ಎಂಬುವರು ಕೆಲಸಕ್ಕೆ ಹೊರಗಡೆ ಹೋದಾಗ, ಸದ್ರಿಯವರು ಮನೆಗೆ ಹಗಲಿನಲ್ಲಿ ಅದೇ ಗ್ರಾಮದ ಶ್ರೀ ಮಾದಪ್ಪಗೌಡ ಎಂಬುವರ ಅತ್ತೆ ಮಾವನನ್ನು ಬಲಾತ್ಕಾರವಾಗಿ ಪ್ರವೇಶ ಮಾಡಿಸಿರುತ್ತಾರೆ. ಶ್ರೀ ವಿಜಯನ್ ಎಂಬುವರು ಸಂಜೆ ಮನೆ ಕಡೆ ಬಂದಾಗ ಇವರ ಮನೆಯಲ್ಲಿ ಬೇರೆಯವರು ಒಕ್ಕಲು ಆಗಿರುವುದರಿಂದ ಗಾಬರಿಯಾಗಿ ಬೊಬ್ಬೆ ಹಾಕಿದಾಗ, ಊರಿನವರು ಬಂದು ನೋಡಿದಾಗ ಮಾದಪ್ಪಗೌಡರು ಇವರ ಅತ್ತೆ ಮಾವನನ್ನು ಮನೆಗೆ ನುಗ್ಗಿಸಿದ್ದು ತಿಳಿದು ಬಂತು. ಈ ಸಮಯದಲ್ಲಿ ಊರಿನವರಿಗೂ ಮಾದಪ್ಪಗೌಡರಿಗೂ ಗಲಾಟೆ ನಡೆಯಿತು. ಈ ಗಲಾಟೆಯಿಂದ ಮಾದಪ್ಪಗೌಡರಿಗೆ ಸ್ವಲ್ಪ ಗಾಯವಾಗಿರುವುದು ತಿಳಿದು ಬಂದಿರುತ್ತದೆ. ಹೀಗಿರುವಾಗ ಕಡಪ ಆರಕ್ಷಕ ಠಾಣಾ ಉಪ ನಿರೀಕ್ಷಕರಾದ ಶ್ರೀ ಮೋಹನ್ ಎಂಬುವರು ಹಗಲು ದರೋಡೆ ಮಾಡಿ, ಬೇರೆಯವರ ಮನೆಗೆ ಬಲಾತ್ಕಾರ ಪ್ರವೇಶ ಮಾಡಿದ ಶ್ರೀ ಮಾದಪ್ಪಗೌಡ ಎಂಬುವರಿಗೆ ಹೆಣದ ಬಲದಿಂದ ಸಂಪೂರ್ಣ ರಕ್ಷಣೆ ನೀಡಿ, ಬಡವನಾದ, ನಿಜವಾದ ನಿವಾಸಿ ಶ್ರೀ ವಿಜಯನ್‌ರವರಿಗೆ ರಕ್ಷಣೆ ನೀಡದೆ, ಮನೆಯನ್ನು ಬಿಟ್ಟುಕೊಡುವ ವ್ಯವಸ್ಥೆ ಮಾಡದೇ ವಿಜಯನ್‌ರವರ ಮನೆ ತೆರಿಗೆ ರಶೀದಿ, ಹಸಿರು ಕಾರ್ಡ್ ಇವುಗಳನ್ನು ಠಾಣೆಯಲ್ಲಿ ಇರಿಸಿ, ನೀನು ಊರು ಬಿಟ್ಟು ಹೋಗದಿದ್ದಲ್ಲಿ ನಿನ್ನ ಕೈಕಾಲು ಮುರಿದು ಹಾಕುತ್ತೇನೆ ಎಂದು ಬೆದರಿಕೆ ಹಾಕಿರುತ್ತಾರೆ ಎಂದು ತಿಳಿದು ಬರುತ್ತದೆ. ಆದುದರಿಂದ, ಕಂದಾಯ ಇಲಾಖೆಯಿಂದ ಬಡ ಅತಿಕ್ರಮ ಜಮೀನಂದಾರನಿಗೆ ಕೃಷಿ ಮಾಡಿದ ಜಮೀನನ್ನು ನೀಡುವಂತೆ ವ್ಯವಸ್ಥೆ ಮಾಡುವುದಲ್ಲದೆ ಕಡಪ ಆರಕ್ಷಣ ಠಾಣಾ ಉಪ ನೀರಿಕ್ಷಕರಿಂದ ವಿಜಯನ್‌ರವರಿಗೆ ಆದ ಅನ್ಯಾಯವನ್ನು ಪರಿಶೀಲಿಸಿ, ಇವರಿಗೆ ರಕ್ಷಣೆ ನೀಡುವಂತೆ ಕ್ರಮ ಕೈಗೊಳ್ಳಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಸದನದ ಮುಂದಿರುವ ಭೂ ಸುಧಾರಣಾ ಕಾಯಿದೆ ಸೆಕ್ಷನ್ ೮೪ರ ತಿದ್ದುಪಡಿ ಮಸೂದೆ ಪಾಸ್ ಆದ ನಂತರದ ಇದರ ಬಗ್ಗೆ ಕ್ರಮ ಕೈಗೊಳ್ಳುತ್ತೇನೆ.

೧೬) ರಾಯಚೂರಿನ ನಿಜಲಿಂಗಪ್ಪ ನಗರದಲ್ಲಿ ವಾಸವಾಗಿರುವ ಮಾಜಿ ಮಂತ್ರಿ ಬಿ. ಶಿವಣ್ಣ ಅವರ ಮನೆಯಲ್ಲಿ ಭಾರಿ ಕಳ್ಳತನವಾಗಿರುವುದು.

ಶ್ರೀ ಜಿ. ರಾಮಕೃಷ್ಣ.—ಮಾನ್ಯ ಅಧ್ಯಕ್ಷರೇ, ರಾಯಚೂರಿನ ನಿಜಲಿಂಗಪ್ಪ ನಗರದಲ್ಲಿ ಕೆ. ಹೆಚ್, ಬಿ. ಕಾಲೋನಿಯ ೧೫೯ನೇ ಮನೆಯಲ್ಲಿರುವ ಮಾಜಿ ಮಂತ್ರಿ ಶ್ರೀ ಬಿ. ಶಿವಣ್ಣ ಅವರ ಮನೆಯಲ್ಲಿ ೧೯೮೫ ರಿಂದ ಈವರೆಗೆ ೪ ಭಾರಿ ಕಳ್ಳತನವಾಗಿದ್ದು, ಇದುವರೆಗೆ ಅಪರಾಧಿಗಳನ್ನು ಪತ್ತೆ ಹಚ್ಚಿರುವುದಿಲ್ಲ. ಶ್ರೀ ಶಿವಣ್ಣ ಅವರು ಈ ಕಳ್ಳತನದಿಂದಾಗಿ ನಗದು ಹಾಗೂ ಒಡವೆ ವಸ್ತುಗಳ ಮೂಲಕ ಸಹಸ್ರಾರು ರೂಪಾಯಿಗಳನ್ನು ಕಳೆದುಕೊಂಡಿದ್ದಾರೆ. ಅಲ್ಲದೆ ಮನೆಯ ಕಿಟಕಿ ಬಾಗಿಲುಗಳನ್ನು ಕೂಡ ಮುರಿದು ಹಾಕಲಾಗಿದೆ. ಈ ರೀತಿ ಪದೇ ಪದೇ ಕಳ್ಳತನಗಳಾಗುತ್ತಿದ್ದಾಗ್ಲೂ ಈ ಬಗ್ಗೆ ಪೋಲೀಸಿನವರು ಯಾವುದೇ ಕ್ರಮವನ್ನು ಕೈಕೊಳ್ಳದೆ, ಕರ್ತವ್ಯ ನಿರ್ವಹಿಸುವಲ್ಲಿ ವಿಫಲರಾಗಿದ್ದಾರೆ. ಮಾನ್ಯ ಶಿವಣ್ಣ ಅವರು ಈ ಬಗ್ಗೆ ಪೋಲೀಸರಿಗೆ ಅಷ್ಟೇ ಅಲ್ಲದೆ ಸನ್ಮಾನ್ಯ ರಾಜ್ಯಪಾಲರವರಿಗೂ ಅವರು ಗೃಹ ಮಂತ್ರಿಗಳಾಗಿದ್ದಾಗ ಸ್ವತಃ ಪತ್ರ ಬರೆದು ತಿಳಿಸಿ, ಈ ಬಗ್ಗೆ ಪೂರ್ಣ ವ್ಯವಸ್ಥೆ ಮಾಡಬೇಕೆಂದು ಕೋರಿದ್ದಾರೆ. ಆದಾದ ನಂತರ ೩ ಬಾರಿ ಕಳ್ಳತನವಾಗಿರುವುದನ್ನು ನೋಡಿದಲ್ಲಿ ಪೋಲೀಸರ ನಿಷ್ಕ್ರಿಯತೆ ಇಲ್ಲಿ ಎದ್ದು ಕಾಣುತ್ತದೆ. ಆದ್ದರಿಂದ ಸರಕಾರದ ಹಾಗೂ ಪೋಲೀಸಿನವರ ಈ ನಿಷ್ಕ್ರಿಯ ಧೋರಣೆಯನ್ನು ಖಂಡಿಸಿ ಕರ್ತವ್ಯ ವಿಮುಖರಾಗಿರುವ ಪೋಲೀಸಿನವರ ಮೇಲೆ ಕ್ರಮ ಕೈಗೊಳ್ಳುವ ಬಗ್ಗೆ ಈ ಸದನಕ್ಕೆ ಹೇಳಿಕೆ ನೀಡಬೇಕೆಂದು ಮುಖ್ಯ ಮಂತ್ರಿಗಳನ್ನು ಒತ್ತಾಯಿಸುತ್ತೇನೆ.